ಪದಬಂಧ




ಎಡದಿಂದ ಬಲಕ್ಕೆ :

1. ಅವನು ಹೆದರಿ ಕಂಪಿಸುತ್ತಿರುವುದನ್ನು ಕಂಡರೇ ಕರುಣೆ ಬರುತ್ತದೆ (4)
3. ಭಕ್ತಿ ಪರವಶರಾಗುವವರಿಗಷ್ಟೇ ಅಲ್ಲಿ ಒಳ ಹೋಗಲು ಅವಕಾಶ (3)
4. ಗಾರೆ ಕೆಲಸ ಮಾಡುವ ಆತನಿಗೆ ಮಹಾ ಅಹಂಕಾರ (3)
6. ವನ ರಕ್ಷಿಸುವ ಕೆಲಸದ ಕಡೆಗೆ ಹೊಸ ಹೆಜ್ಜೆ (4)
7. ಪರದೆಯನ್ನು ಕೊಳ್ಳಲು ಬಳಸಿದ್ದು ಬೇರೆಯವರ ಹಣ (4)
8. ರಮಣನ ಬೆನ್ನ ಮೇಲೆ ಬರಾಬರಿ ಹತ್ತು ಕಿಲೋ ತೂಕ (4)
10. ಅಕ್ಷರವನ್ನಲ್ಲ, ಆದರೆ ಯಾವುದೇ ಆಕಾರದ ಚಿತ್ರ ರಚಿಸುವವ (4)
12. ಅಭಯ ಪಡೆಯುವುದರ ಬಗೆಗೆ ನಿಮ್ಮದೇನು ಆಲೋಚನೆ? (4)
14. ಮುರುಗನನ್ನು ಕುರಿತದ್ದು, ಸುಧೆಯಂತಹ ಹಾಡು (4)
16. ನೋವು ನಿವಾರಣೆಗೆ ತಕ್ಕ ಸಹಾಯ ಹೇಗೆ ?(3)
17. ಸಂತನನ್ನು ಬಾರೆಂದರೆ ಋತುರಾಜ ಬಂದ (3)
18. ಪಾದ ಪ್ರಕ್ಷಾಲನದಿಂದ ಲಭ್ಯವಾದದ್ದು ಹತ್ತು ವಿಧ ಲಾಭ (4)

ಮೇಲಿಂದ ಕೆಳಕ್ಕೆ :

1. ಅಶಕ್ತನನ್ನು ಸರಿಪಡಿಸಲು ಮೊದಲು ಬೇಕಾದದ್ದು ಊಟ (3)
2. ಮಿತ್ರಪಡೆಗಳ ಮುಖ್ಯಸ್ಥರ ನಡುವೆ ಇದೇನು ಪಂದ್ಯದಾಟ ? (3)
3. ಆತನ ಪ್ರಸಿದ್ಧಿಗೆ ಕಾರಣವಾದದ್ದು ಅಲಂಕಾರ ಸಾಮಗ್ರಿ (4)
5. ವರ್ಣನೆಗೆಟುಕದ ಮಹಿಮೆಯ ಜಲದೇವತೆ (3)
7. ಸೈನಿಕರ ಪಾಳಯವನ್ನು ಕಂಡೊಡನೆ ಶತ್ರುಗಳ ಓಟ (4)
9. ಸಾಮಾನ್ಯರದೇ ಸಭೆಯಾದರೂ ತುಂಬ ಸ್ವಾರಸ್ಯ ತುಂಬಿತ್ತು (4)
11. ಕರಕರನೆ ಕತ್ತರಿಸಿ ಜೋಡಿಸುವ ಯಂತ್ರಗಳ ಕೈಗಾರಿಕೆ (3)
13. ಮತ್ತೆ ಮತ್ತೆ ಅಭ್ಯಾಸ ಮಾಡುವ ಬಗ್ಗೆ ನಿಮ್ಮ ಆಶಯ ? (4)
14. ಗೋವಿಂದನ ದರ್ಶನಕ್ಕೆ ನಡೆದ ದೂರಕ್ಕೆ ಪ್ರಾಚೀನ ಅಳತೆ (3)
15. ಬಂತಲ್ಲ ಕಡೆಗೂ ಅದ್ಭುತ ತಾಳವಾದ್ಯ (3)

## 02-3-2017ರ ಉತ್ತರಗಳು

ಎಡದಿಂದ ಬಲಕ್ಕೆ :
1. ಆಹ್ವಾನ 3. ವಿದ್ಯಾರ್ಥಿ 4. ಗರಿಮೆ 6. ಪರವಶ 7. ಬಲಿದಾನ 9. ಗತಕಾಲ 11. ಮುಜುಗರ 15. ಗದರು 16. ಲೆಕ್ಕಿಗ 17. ಹುರುಪು

ಮೇಲಿಂದ ಕೆಳಕ್ಕೆ :
1. ಆರ್ಥಿಕ 2. ನಗಣ್ಯ 3. ವಿಪ್ಲವ 5. ಮೆಲ್ಲುಲಿ 6. ಪಲ್ಲಂಗ 8. ನಶ್ವರ 10. ಕಾಳಗ 11. ಜುಲೀಗ (=ಗಲೀಜು ತಲೆಕೆಳಗು) 13. ಅರುಹು 14. ಮಲೆಪು

## ಪ್ರಶ್ನಾ ೦ಕಣ

# ಜೀಬ್ರಾ ವೇಷ: ಏನೇನು ಪ್ರಯೋಜನ?

ಸ್ತನಿ ವರ್ಗದ 'ಈಕ್ವಿಡೇ' ಕುಟುಂಬದ ಜೀಬ್ರಾ ಸ್ಪಷ್ಟವಾಗಿಯೇ ಕುದುರೆ, ಕತ್ತೆಗಳ ಅತಿ ನಿಕಟ ಸಂಬಂಧಿ. ಆದರೆ ಕುದುರೆ, ಕತ್ತೆಗಳಂತೆ ಸಾಕು ಪ್ರಾಣಿಯಾಗದೆ ವನ್ಯ ಜೀವಿಯಾಗಿಯೇ ಉಳಿದಿರುವ ಜೀಬ್ರಾ ಅದರ ಅತಿ ವಿಶಿಷ್ಟ ಕಪ್ಪು ಬಿಳುಪಿನ ಪಟ್ಟೆಗಳ ವೇಷದಿಂದಾಗಿಯೇ 'ಪಟ್ಟೆ ಕುದುರೆ' ಎಂದೇ ಪ್ರಸಿದ್ಧ (ಚಿತ್ರ 1). ನೈಸರ್ಗಿಕವಾಗಿ ಆಫ್ರಿಕದ ಹುಲ್ಲು ಬಯಲಿಗಷ್ಟೇ ಸೀಮಿತವಾದ ವಾಸ್ತವ್ಯ ಹೊಂದಿರುವ ಜೀಬ್ರಾಗಳಲ್ಲಿ ಪ್ರಸ್ತುತ ಮೂರು ಪ್ರಭೇದಗಳಿವೆ ; ಒಂಬತ್ತು ಉಪ ಪ್ರಭೇದಗಳಿವೆ. ಜೀಬ್ರಾಗಳ ಪ್ರಭೇದ ಉಪಪ್ರಭೇದಗಳ ವಿಭಿನ್ನತೆ ಪ್ರಮುಖವಾಗಿ ಕಾಣುವುದೇ ಅವುಗಳ ವೇಷದಲ್ಲಿ. ಜೀಬ್ರಾ ಪ್ರಭೇದಗಳ ಪಟ್ಟೆಗಳ ಸಂಖ್ಯೆ, ಅಗಲ, ವರ್ಣತೀವ್ರತೆ ಇವೆಲ್ಲ ಭಿನ್ನ ಭಿನ್ನ. ಎಷ್ಟೆಂದರೆ ಪ್ರತಿ ಪ್ರಭೇದದ ಪ್ರತಿ ಜೀಬ್ರಾದ ಪಟ್ಟೆ ಚಿತ್ತಾರವೂ ಬೆರಳಚ್ಚಿನಂತೆ ಅದರದ್ದೇ ವಿಶಿಷ್ಟ ಕೂಡ. ಅಷ್ಟೇ ಅಲ್ಲದೆ ಈ ವೇಷದಿಂದ ಜೀಬ್ರಾಗಳಿಗೆ ಒದಗಿರುವ ಜೀವರಕ್ಷಕ ಪ್ರಯೋಜನಗಳು ಇವು :

* ಪಟ್ಟೆ ವೇಷ ಜೀಬ್ರಾಗಳಿಗೆ 'ಮಾರುವೇಷ' ವಾಗಿ ಉಪಯುಕ್ತವಾಗಿದೆ. ಹುಲ್ಲು ಬಯಲುಗಳಲ್ಲಿ ನಿಂತ ಜೀಬ್ರಾ ಹಿಂಡುಗಳು (ಚಿತ್ರ 2) ಈ ವೇಷದಿಂದಾಗಿ ಸಿಂಹ ಚಿರತೆಗಳಂತಹ ಬೇಟೆಗಾರರ ಕಣ್ಣಿಗೆ ಸುಲಭವಾಗಿ ಕಾಣುವುದಿಲ್ಲ. ಅಲ್ಲದೆ ಇಡೀ ಹಿಂಡು ಚಲನಶೀಲವಾಗಿರುವಾಗ ಪಟ್ಟೆಗಳ ದೃಶ್ಯ ಬೇಟೆಗಾರರ ದೃಷ್ಟಿಯನ್ನೇ ಗಲಿಬಿಲಿಗೊಳಿಸಿ ಬಲಿಯ ಮೇಲೆ ದೃಷ್ಟಿ ನೆಡುವುದನ್ನೇ ಅಸಾಧ್ಯವಾಗಿಸುತ್ತದೆ.

* ಹುಲ್ಲು ಬಯಲುಗಳಲ್ಲಿ ಕುಟುಕುವ, ಕಚ್ಚುವ, ರಕ್ತ ಹೀರುವ 'ಟ್ಸೆಟ್ಸೇ ನೊಣ, ಕುದುರೆ ನೊಣ ಇತ್ಯಾದಿ' ಪಿಡುಗಿನ ಕೀಟಗಳು ಅಸಂಖ್ಯ. ಜೀಬ್ರಾಗಳ ಪಟ್ಟೆ ವೇಷ ಇಂತಹ ಕೀಟಗಳಿಗೆ ಅತ್ಯಂತ ಅನಾಕರ್ಷಕ. ಹಾಗಾಗಿ ಜೀಬ್ರಾಗಳ ಮೇಲೆ ಕೀಟಗಳ ದಾಳಿ ಪಟ್ಟೆ ರಹಿತ ವೇಷದ ಇತರ ಪ್ರಾಣಿಗಳಿಗಿಂತ ಬಹಳ ಕಡಿಮೆ. ವಿಸ್ಮಯ ಏನೆಂದರೆ ಕೀಟಗಳ ದಟ್ಟಣೆ ಅಧಿಕವಾಗಿರುವ ಪ್ರದೇಶಗಳಲ್ಲಿನ ಜೀಬ್ರಾ ಪ್ರಭೇದಗಳ ಪಟ್ಟೆ ವೇಷದ ಬಣ್ಣ ಗಾಢ; ದಟ್ಟಣೆ ಕಡಿಮೆ ಇದ್ದಂತೆಲ್ಲ ಕ್ರಮೇಣ ತಿಳಿ ವರ್ಣ (ಚಿತ್ರ 3).

* ಜೀಬ್ರಾ ವೇಷದ ಮತ್ತೊಂದು ಅತ್ಯದ್ಭುತ ವಿಶೇಷವನ್ನು ಅತ್ಯಂತ ಇತ್ತೀಚೆಗೆ ಸಂಶೋಧಕರು ಸ್ಪಷ್ಟವಾಗಿ ಪತ್ತೆ ಹಚ್ಚಿದ್ದಾರೆ. ಜೀಬ್ರಾದ ಚರ್ಮದ ಕಪ್ಪು ಬಿಳಿ ಪಟ್ಟೆಗಳು ಅದರ ಶರೀರದ ಮೇಲ್ಮೈ ತಾಪವನ್ನು




ಕಡಿಮೆಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಕಪ್ಪು ಪಟ್ಟೆಗಳು ಬಿಸಿಲಿನ ತಾಪವನ್ನು ಗರಿಷ್ಠ ಹೀರಿದರೆ ಬಿಳಿ ಪಟ್ಟೆಗಳು ತಾಪವನ್ನು ಸಂಪೂರ್ಣ ಪ್ರತಿಫಲಿಸುತ್ತವೆ. ಹಾಗಾಗಿ ಜೀಬ್ರಾದ ಶರೀರದ ಸುತ್ತ ವಿಶೇಷ ಬಿಸಿ ಗಾಳಿ ತಂಗಾಳಿ ಪರಿಚಲನೆಯೇ ಏರ್ಪಟ್ಟು ಒಟ್ಟಾರೆ ಪರಿಣಾಮವಾಗಿ ಎಂಥ ಬಿಸಿಲಿನಲ್ಲೂ, ಸೆಖೆಯ ಪರಿಸ್ಥಿತಿಯಲ್ಲೂ ಜೀಬ್ರಾಗಳು ಇತರ ಪ್ರಾಣಿಗಳಿಗಿಂತ ತಂಪಾಗಿ ನೆಮ್ಮದಿಯಾಗಿರುತ್ತವೆ. ಈ ಕಾರಣದಿಂದಲೂ ಅಧಿಕ ಬಿಸಿ ಪ್ರದೇಶದ ಜೀಬ್ರಾ ಪಟ್ಟೆಗಳದು ಗಾಢವರ್ಣ; ಕಡಿಮೆ ಬಿಸಿಯ ಪ್ರದೇಶಗಳಲ್ಲಿ ತಿಳಿವರ್ಣ.

■ ಎನ್. ವಾಸುದೇವ್